ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಅಧಿಕ ಜೆಎಂಎಫ್‌ಸಿ ನ್ಯಾಯಾಲಯ
ರಾಣೇಬೆನ್ನೂರು.
ಸಿ.ಸಿ.ಸಂಖ್ಯೆಃ 80/2023

**ಪಿ ಡಬ್ಲ್ಯೂಃ** 1
ಸಿ ಡಬ್ಲ್ಯೂಃ 1

| | | |
|---|---|---|
| ಸಾಕ್ಷಿಯ ಹೆಸರು | : | ಲತೇಶ್ ಆರ್. ಎಸ್. |
| ತಂದೆಯ ಹೆಸರು | : | ಸುರೇಂದ್ರ ಆರ್. ಎಲ್. |
| ವಯಸ್ಸು | : | 31 |
| ಉದ್ಯೋಗ | : | ಅಬಕಾರಿ ಉಪ ನಿರೀಕ್ಷಕರು |
| ವಾಸಸ್ಥಳ | : | ರಾಣೇಬೆನ್ನೂರು |

ದಿನಾಂಕಃ 24-01-2024 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ನಾನು ದಿನಾಂಕ 01-07-2019 ರಿಂದ ದಿಃ 19-12-2023 ರವರೆಗೆ ರಾಣೇಬೆನ್ನೂರು ಅಬಕಾರಿ ವಲಯದ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ದಿನಾಂಕ 29-03-2023 ರಂದು ಸಂಜೆ 07-00 ಗಂಟೆ ಸಮಯದಲ್ಲಿ ನಾನು ಹಾಗೂ ಚಾಸಾ-4 ರವರು ಚಳಗೇರಿ ಗ್ರಾಮದಲ್ಲಿ ಗಸ್ತು ಮಾಡುತ್ತಿದ್ದಾಗ ಬಂದ ಮಾಹಿತಿಯ ಮೇರೆಗೆ, ಸುಮಾರು 7-15 ಕ್ಕೆ ಚಳಗೇರಿ ಬಸ್ ನಿಲ್ದಾಣದ ಬಳಿ ಹೋಗಿ ಅಲ್ಲಿದ್ದ ಚಾಸಾ -2 ಮತ್ತು 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಅವರಿಗೆ ಬಾತ್ಮಿ ಬಂದ ವಿಚಾರ ತಿಳಿಸಲಾಯಿತು. ಅವರನ್ನು ಕರೆದುಕೊಂಡು ಕರೂರು ಗ್ರಾಮದಿಂದ ಚಳಗೇರಿಗೆ ಹೋಗುವ ರಸ್ತೆಯಲ್ಲಿ ಬರುವ ರೈಲ್ವೆ ಸೇತುವೆ ಮುಂದೆ ರಸ್ತೆಗಾವಲು ಮಾಡುತ್ತಿದ್ದಾಗ, 7-40 ಸುಮಾರಿಗೆ ಒಬ್ಬ ವ್ಯಕ್ತಿ ದ್ವಿಚಕ್ರ ವಾಹನದ ಹಿಂಬದಿಯಲ್ಲಿ ಒಂದು ಚೀಲವನ್ನು ಇಟ್ಟುಕೊಂಡು ಅನುಮಾನಗೊಂಡು ವಾಹನವನ್ನು ನಿಲ್ಲಿಸಲು ಸೂಚಿಸಿದ್ದು, ಸುಮಾರು 30 ಮೀಟರ್ ಅಂತರದಲ್ಲಿ ಗಾಡಿಯನ್ನು ನಿಲ್ಲಿಸಿ ಓಡಿ ಹೋಗಿದ್ದು, ಹಿಡಿಯಲು ಪ್ರಯತ್ನಿಸಿದರೂ ಸಿಗದೇ ಕತ್ತಲಲ್ಲಿ ತಲೆಮರೆಸಿಕೊಂಡಿರುತ್ತಾನೆ.

**ಪಿ ಡಬ್ಲ್ಯೂ: 1**

3. ನಂತರ ಗಾಡಿ ಬಿಟ್ಟು ಹೋದ ಸ್ಥಳಕ್ಕೆ ವಾಪಸ್ಸು ಬಂದು ಸದರಿ ವಾಹನ ಹಾಗೂ ಅದರೊಂದಿಗಿದ್ದ ಎರಡು ಚೀಲಗಳನ್ನು ಪರಿಶೀಲಿಸಲು ಸ್ಥಳದಲ್ಲಿ ಶೋಧನಾ ಸಮುಚಿತ ಆಧಾರ ವರದಿಯನ್ನು ತಯಾರಿಸಿ ಸದರಿ ಚೀಲಗಳನ್ನು ಚಾ ಸಾ 2 ಮತ್ತು 3 ರವರ ಸಮಕ್ಷಮ ತೆರೆದು ನೋಡಲಾಗಿ ಒಂದನೇ ಚೀಲವು ವಿಮಲ್ ಪಾನ್ ಮಸಾಲಾ ಎಂದು ಬರೆದಿದ್ದ ಬಿಳಿ ಬಟ್ಟೆಯ ಚೀಲವಾಗಿದ್ದು ಅದರಲ್ಲಿ 90 ಮಿಲಿಯ 70 ಹೈವರ್ಡ್ಸ್ ಚೀಯರ್ಸ್ ವಿಸ್ಕಿಯ ಟೆಟ್ರಾ ಪ್ಯಾಕಗಳು , 90 ಮಿಲಿಯ 50 ಓಸಿ ವಿಸ್ಕಿಯ ಟೆಟ್ರಾ ಪ್ಯಾಕಗಳು ಇದ್ದವು. ಎರಡನೇ ಚೀಲವು ನುಜಿವೀಡು ಸಿಡ್ಸ ಎಂದು ಬರೆದಿದ್ದ ಹಳದಿ ಬಣ್ಣದ ಚೀಲವಾಗಿದ್ದು ಅದರಲ್ಲಿ ರಾಯಲ್ ಚಾಲೆಂಜ್ ಹೆಸರಿನ ಮೂರು ರಟ್ಟಿನ ಪೆಟ್ಟಿಗೆಗಳು ಇದ್ದು ತಲಾ 12 ರಂತೆ 36 ರಾಯಲ್ ಚಾಲೆಂಜ್ ಸ್ಟ್ರಾಂಗ್ ಪ್ರಿಮಿಯಂ ಬಿಯರ್ ಬಾಟಲ್ ಗಳು ಇದ್ದವು. ಒಟ್ಟು 10.8 ಲೀಟರ್ ಮದ್ಯ ಹಾಗೂ 23.400 ಲೀಟರ್ ಬಿಯರ್ ಇತ್ತು. ಅವುಗಳ ಮೇಲಿನ ಭದ್ರತಾ ಚೀಟಿಗಳನ್ನು ಹರಿದು ಹಾಕಲಾಗಿತ್ತು.

4. ದೊರೆತ ಮದ್ಯದಿಂದ ತಲಾ 15 ರಂತೆ 30 ಟೆಟ್ರಾ ಪ್ಯಾಕ್ ಗಳನ್ನು ಹಾಗೂ 3 ಬಿಯರ್ ಬಾಟಲ್ ಗಳನ್ನು ರಾಸಾಯನಿಕ ವಿಶ್ಲೇಷಣಾ ಪರೀಕ್ಷೆಗಾಗಿ ಮಾದರಿಯಾಗಿ ಪ್ರತ್ಯೇಕಿಸಿ ಒಂದು ಬಿಳಿ ಬಟ್ಟೆಯಲ್ಲಿ ಹಾಕಿ ದಾರದಿಂದ ಹೊಲೆದು ಸೀಲ್ ಮಾಡಿ ಸಂಖ್ಯೆ 661ರಂತೆ ಇಲಾಖಾ ಮೊಹರು ಮಾಡಲಾಯಿತು. ಸ್ಥಳದಲ್ಲಿ ಮಾದರಿ ಚೀಟಿಗಳನ್ನು ತಯಾರಿಸಿ ಅದಕ್ಕೆ ಅಂಟಿಸಿ ನಾನು ಹಾಗೂ ಸಾಕ್ಷಿದಾರರು ಸಹಿ ಮಾಡಿದೆವು. ದ್ವಿಚಕ್ರ ವಾಹನವನ್ನು ಪರಿಶೀಲಿಸಲಾಗಿ ಅದು ಕಪ್ಪು ಬಣ್ಣದ ಹೊಂಡಾ ಕಂಪನಿಯ ಡಿಯೋ ದ್ವಿಚಕ್ರ ವಾಹನವಾಗಿದ್ದು ಅದರ ಸಂಖ್ಯೆ ಕೆಎ-68/ಕೆ -3370 ಆಗಿತ್ತು. ಅದನ್ನು ಪಂಚರ ಸಮಕ್ಷಮ ಅಮಾನತುಪಡಿಸಿಕೊಳ್ಳಲಾಯಿತು. ಸದರಿ ಜಪ್ತಾದ ಮದ್ಯ ಹಾಗೂ ದ್ವಿಚಕ್ರ ವಾಹನವನ್ನು ಠಾಣೆಗೆ ತಂದು ಸ್ವ ದೂರು ಸಿದ್ದಪಡಿಸಿ ಓಡಿ ಹೋದ ಆರೋಪಿ ಹಾಗೂ ವಾಹನದ ಮಾಲೀಕನ ವಿರುದ್ಧ ಪ್ರಕರಣ ದಾಖಲಿಸಿರುತ್ತೇನೆ. ಕಡತವನ್ನು ಮುಂದಿನ ತನಿಖೆಗಾಗಿ **ಚಾ ಸಾ 7** ರವರಿಗೆ ವರ್ಗಾಯಿಸಿರುತ್ತೇನೆ.

5. ದಿನಾಂಕ 29-03-2023 ರ ಶೋಧನಾ ಸಮುಚಿತ ಆಧಾರವನ್ನು **ನಿಪಿ 1 ಎಂದು,** ಅದರಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 1 ಎ** ಎಂದು, ಮಹಜರು ವರದಿಯನ್ನು **ನಿಪಿ 2** ಎಂದು, ಅದರಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 2 ಎ** ಎಂದು, ಸ್ವ ದೂರನ್ನು **ನಿಪಿ 3** ಎಂದು, ಅದರಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 3 ಎ** ಎಂದು, ಪ್ರ ವ ವರದಿಯನ್ನು **ನಿಪಿ 4** ಎಂದು, ಅದರಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 4 ಎ** ಎಂದು,ಒಂದು ಪೋಟೋ ಹಾಗೂ

ಸಿಡಿಯನ್ನು **ನಿಪಿ-5 ಮತ್ತು ನಿಪಿ -6** ಎಂದು ಗುರುತಿಸಲಾಯಿತು. ಮಾದರಿ ಮದ್ಯವನ್ನು ಸಾಕ್ಷಿದಾರರು ನೋಡಿ ಗುರುತಿಸಿದ ಮೇರೆಗೆ ಒಟ್ಟಾಗಿ **ಮು.ಮಾ.1** ಎಂದು ಗುರುತಿಸಲಾಯಿತು.

6. ಸಾಕ್ಷಿದಾರರು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಜಿ ಕೆ ಎಂ ವಕೀಲರಿಂದ:**

ಕರೂರು ಗ್ರಾಮದಿಂದ ಚಳಗೇರಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಮದ್ಯ ಸಾಗಾಟ ಮಾಡುತ್ತಿರುವ ಬಗ್ಗೆ ಬಾತ್ಮಿ ಬಂದಿರುತ್ತದೆ. ಬಾತ್ಮಿ ಬಂದಾಗ ನಾವು ಚಳಗೇರಿ ಗ್ರಾಮದ ಯಾವ ಸ್ಥಳದಲ್ಲಿ ಗಸ್ತು ಮಾಡುತ್ತಿದ್ದೇವು ಎಂದು **ನಿಪಿ-3** ರ ಸ್ವ ದೂರಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ . ಗ್ರಾಮದಲ್ಲಿ ಗಸ್ತು ಮಾಡುತ್ತಿದ್ದೇವು ಎಂದು ತಿಳಿಸಲಾಗಿದೆ. ಆದಿನ ನಮ್ಮ ಇಲಾಖಾ ವಾಹನದಲ್ಲಿ ಗಸ್ತು ಕರ್ತವ್ಯಕ್ಕೆ ಹೋಗಿರುತ್ತೇನೆ. ಪಂಚರನ್ನು ಹೇಗೆ ಕರೆದುಕೊಂಡು ಘಟನಾ ಸ್ಥಳಕ್ಕೆ ಹೋದೆವು ಎಂದು **ನಿಪಿ-3** ರಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ಅವರು ತಮ್ಮ ದ್ವಿಚಕ್ರ ವಾಹನದಲ್ಲಿ ಬಂದಿರುತ್ತಾರೆ. ಸದರಿ ದ್ವಿಚಕ್ರ ವಾಹನದ ಸಂಖ್ಯೆಯನ್ನು **ನಿಪಿ-3** ರಲ್ಲಿ ನಮೂದು ಮಾಡಿರುವುದಿಲ್ಲ. ಘಟನಾ ಕಾಲಕ್ಕೆ ಕತ್ತಲು ಆಗಿತ್ತು ಎಂದರೆ ಸರಿ . ಕತ್ತಲಲ್ಲಿ ಬರುವ ವಾಹನಗಳು ಮುಂದಿನ ಲೈಟ್‌ನ ತೀಕ್ಷಣತೆಗೆ ವಾಹನ ಸವಾರ ಹಾಗೂ ವಾಹನದಲ್ಲಿನ ವಸ್ತುಗಳು ಕಾಣುವುದಿಲ್ಲ ಎಂದರೆ ಸರಿ . ಹತ್ತಿರ ಬಂದಂತೆ ಕಾಣಿಸುತ್ತದೆ. 30 ಮೀಟರ್ ಅಂತರದಲ್ಲಿ ಕಾಣಿಸುವುದಿಲ್ಲ ಎಂದರೆ ಸರಿಯಲ್ಲ.

2. ಘಟನಾ ಸ್ಥಳದ ಚೆಕ್ಕುಬಂದಿ ಹೇಳಬಲ್ಲೆ. ಪೂರ್ವಕ್ಕೆ ಕರೂರು ರಸ್ತೆ, ಪಶ್ಚಿಮಕ್ಕೆ ಚಳಗೇರಿ ರಸ್ತೆ, ಉತ್ತರ ಮತ್ತು ದಕ್ಷಿಣಕ್ಕೆ ಹೊಲಗಳು ಇರುತ್ತದೆ. ರೈಲ್ವೆ ಮೇಲ್ ಸೇತುವೆಯು ಘಟನಾ ಸ್ಥಳದ ಪೂರ್ವ ದಿಕ್ಕಿನಲ್ಲಿ ಇರುತ್ತದೆ. ಮೇಲ್ ಸೇತುವೆ ಕರೂರು ಗ್ರಾಮದಿಂದ ಸುಮಾರು 2-3 ಕಿ.ಮೀ. ದೂರದಲ್ಲಿ ಇರಬಹುದು. ಮೇಲ್ ಸೇತುವೆಯು ಕರೂರು ಗ್ರಾಮಕ್ಕೆ ಹೊಂದಿಕೊಂಡಂತೆ ಬರುತ್ತದೆ ಎಂದರೆ ಸರಿ . ನಾನು ಘಟನಾ ಸ್ಥಳಕ್ಕೆ ಹೋಗದ ಕಾರಣ ನಿರ್ದಿಷ್ಟವಾಗಿ ಅಂತರ ತಿಳಿದಿಲ್ಲ ಎಂದರೆ ಸರಿಯಲ್ಲ.

3. **ನಿಪಿ -5** ರ ಪೋಟೋ ಘಟನಾ ಸ್ಥಳದಲ್ಲಿ ತೆಗೆದಿಲ್ಲ ಎಂದರೆ ಸರಿ . ಅದನ್ನು ತನಿಖಾಧಿಕಾರಿಗಳು ತೆಗೆದಿರುತ್ತಾರೆ. ಆರೋಪಿಯು ಘಟನಾ ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ರ ವಸ್ತುಗಳಿಗೂ ಆರೋಪಿಗೂ ಯಾವುದೇ ಸಂಬಂದ ಇಲ್ಲ ಎಂದರೆ

ಸರಿಯಲ್ಲ. ಚುನಾವಣಾ ಅಂಕಿ ಅಂಶಗಳಿಗಾಗಿ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು.

ನನ್ನ ಸಮಕ್ಷಮ

sd/-

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.